# ಕರ್ನಾಟಕ ಸರ್ಕಾರದ ನಡಾವಳಿಗಳು.

ವಿಷಯ-ಶ್ರೀ ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು ಶಹಾಪೂರ ಯಾದಗಿರಿ ಜಿಲ್ಲೆ, ಇವರು ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ನೀಡದೇ ಇರುವ ಬಗ್ಗೆ -ಕರ್ತವ್ಯ ನಿರ್ಲಕ್ಷ-ಶಿಸ್ತು ಕ್ರಮ ಕುರಿತು. 76

**ಓದಲಾಗಿದೆ:-**

ಸರ್ಕಾರದ ಆದೇಶ ಸಂಖ್ಯೆ: ಕೃತೋಇ 66 ಕೃಪವಿ 2010, ದಿನಾಂಕ: 28/02/2011

**ಪ್ರಸ್ತಾವನೆ:-**

ಮೇಲೆ ಓದಲಾದ ದಿನಾಂಕ: 28-02-2011ರ ಸರ್ಕಾರಿ ಆದೇಶದಲ್ಲಿ, ಶ್ರೀ ಎ. ರಾಜಣ್ಣ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು ಇವರು, ಮಾಹಿತಿ ಹಕ್ಕು ಅಧಿ ನಿಯಮದಡಿ ಶ್ರೀ ಶರಣಪ್ಪ ಕ್ಯಾತನಾಳ ದೊಡ್ಡಮನಿ ಎಂಬುವವರು ಕೋರಿದ ಮಾಹಿತಿಯನ್ನು ಕಾಲಮಿತಿಯೊಳಗೆ ನೀಡದೇ ಕರ್ತವ್ಯ ಲೋಪವೆಸಗಿರುವುದರಿಂದ ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು ಇವರು ಶ್ರೀ ಎ. ರಾಜಣ್ಣ ಸಹಾಯಕ ಕೃಷಿ ನಿರ್ದೇಶಕರು, ಶಹಪೂರ ಇವರಿಗೆ ರೂ. 25,000/-ಹಣ ದಂಡ ಕಟ್ಟಲು ಸೂಚಿಸಿದ್ದರೂ ಸಹ ಸದರಿ ದಂಡದ ಹಣ ಪಾವತಿಸಿರುವುದಿಲ್ಲವೆಂಬ ಆರೋಪದ ಮೇಲೆ ಅವರ ಮೇಲಿನ ವಿಚಾರಣೆಯನ್ನು ಬಾಕಿ ಇಟ್ಟು ಸೇವೆಯಿಂದ ಅಮಾನತ್ತಗೊಳಿಸಲಾಗಿತ್ತು.

ಪ್ರಸ್ತುತ ಶ್ರೀ ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು, ಇವರು ಸದರಿ ದಂಡದ ಮೊತ್ತವನ್ನು ಸರ್ಕಾರಕ್ಕೆ ಕಟ್ಟಲಾಗಿದೆಯೆಂದು ಸಂಬಂಧಪಟ್ಟ ಚಲನಿನೊಂದಿಗೆ ಸರ್ಕಾರಕ್ಕೆ ಮನವಿ ಸಲ್ಲಿಸಿ, ತಮ್ಮ ನಿಲಂಬನೆಯನ್ನು ತೆರವುಗೊಳಿಸಬೇಕೆಂದು ಕೋರಿದ್ದಾರೆ. ಸದರಿಯವರ ಮನವಿಯನ್ನು ಪರಿಶೀಲಿಸಿದ ಸರ್ಕಾರ ಶ್ರೀ ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರ ಇವರ ನಿಲಂಬನೆಯನ್ನು ತೆರವುಗೊಳಿಸಿ, ಅವರನ್ನು ಸೇವೆಯಲ್ಲಿ ಪುನರ್ ಸ್ಥಾಪಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 66 ಕೃಪವಿ 2010,**

**ಬೆಂಗಳೂರು, ದಿನಾಂಕ: 6ನೇ ಜೂನ್ 2011**

ಶ್ರೀ ಎ.ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು, ಶಹಪೂರ, ಯಾದಗಿರ ಜಿಲ್ಲೆರವರ ಮೇಲಿನ ಆರೋಪಗಳ ಬಗೆಗಿನ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು, ಇವರ ಅಮಾನತ್ತನ್ನು ರದ್ದುಪಡಿಸಿ, ಸಹಾಯಕ ಕೃಷಿ ನಿರ್ದೇಶಕರು, ಯಾದಗಿರ ಇಲ್ಲಿ ಖಾಲಿಯಿರುವ ಹುದ್ದೆಗೆ ಮರು ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.
6/6/11

ಇವರಿಗೆ:-

1] ಮಹಾಲೇಖಪಾಲರು(ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) ಕರ್ನಾಟಕ, ಬೆಂಗಳೂರು.

(2)

2] ಆಯುಕ್ತರು ಕೃಷಿ ಇಲಾಖೆ, ಬೆಂಗಳೂರು.

3] ಜಂಟಿ ಕೃಷಿ ನಿರ್ದೇಶಕರು ಯಾದಗಿರ, ಯಾದಗಿರ ಜಿಲ್ಲೆ.

4] ಸಹಾಯಕ ಕೃಷಿ ನಿರ್ದೇಶಕರು, ಯಾದಗಿರ ,

5] ಸಂಬಂಧಪಟ್ಟ ಅಧಿಕಾರಿಯವರಿಗೆ [ಕೃಷಿ ಆಯುಕ್ತರ ಮೂಲಕ]

6] ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.